

ಕಲೆಯ ಆಲಯದಂತಿರುವ ಪಾರ್ಶ್ವನಾಥ ಬಸದಿ

ಆದಿನಾಥ

ವರ್ಣನೆಗಳನ್ನು ಕಥನಗಳನ್ನು ನೀವು ಕೇಳಿಯೇ ಇರುತ್ತೀರಿ. ಆದರೆ ನಾನೀಗ ಹೇಳಹೊರಟಿರುವುದು ಈ ತಾಣಗಳ ಕತೆಯನ್ನಲ್ಲ. ಹಳೇಬೀಡಿನ ಈ ತಾಣಗಳಿಂದ ಕೊಂಚ ದೂರದಲ್ಲಿರುವ, 'ಮೌನವೊಂದು ಈ ಜಗತ್ತಿನ ಅತ್ಯಂತ ದೊಡ್ಡ ಮಾತು, ಅಂತಹ ಮೌನವನ್ನು ನಾ ನಿಮಗೆ ನೀಡುತ್ತೇನೆ. ಬದುಕಿಗೆ ಬೇಕಾದ ಜೀವಚೈತನ್ಯವೆಲ್ಲವನ್ನೂ ಆ ಮೌನದಲ್ಲಿಯೇ ನಿಮಗೆ ಕೊಟ್ಟುಬಿಡುತ್ತೇನೆ' ಎನ್ನುವಂತೆ ಬಿಸಿಲಿಗೆ ಫಳಫಳ ಹೊಳೆಯುತ್ತ, 'ಬನ್ನಿ ಬನ್ನಿ ರಾಶಿ ರಾಶಿ ಪ್ರವಾಸಿಗರು ನನ್ನಲ್ಲಿ ಮುತ್ತಿಗೆ ಹಾಕದೇ ಇರುವುದರಿಂದ ನಾನು ಒಂದಷ್ಟು ಶುಭ್ರವಾಗಿದ್ದೇನೆ' ಎಂದು ಆದರದ ಸ್ವಾಗತ ಕೋರುವ ಇಲ್ಲಿನ ಜೈನ ಬಸದಿಗಳ ಆಪ್ತಕಥನವನ್ನು.

ಅಂದಹಾಗೆ, ಈ ಸುಂದರ ಜೈನಬಸದಿಗಳು ತಮ್ಮ ಐತಿಹಾಸಿಕ ಕಥನಗಳನ್ನು ಸಾರುತ್ತ ಬಾನಿನ ನೀಲಿ ಬಣ್ಣಗಳಲ್ಲಿ ಒಂದಾದಂತೆ ನಿಂತಿರುವುದು, ಹಳೇಬೀಡಿನ ಹೊಯ್ಸಳೇಶ್ವರ ದೇಗುಲದಿಂದ 2 ಕಿ.ಮೀ. ದೂರದಲ್ಲಿರುವ ಬಸದಿಹಳ್ಳಿಯಲ್ಲಿ. ಬಸದಿಹಳ್ಳಿಗೆ ಬಂದರೆ, ಬಯಲು ಸೀಮೆಯ ಪುಟ್ಟ ಪುಟ್ಟ ಮನೆಗಳು, ರಸ್ತೆ ತುಂಬಾ ಬಸದಿಗೆ ಕಾವಲು ಕಾಯುತ್ತಿರುವಂತೆ ನಿಂತಿರುವ ದನ–ಕರುಗಳು, ಆಡುಗಳು ಎದುರಾಗಿ ಅಪ್ಪಟ ದೇಸಿ ಪರಿಮಳವೊಂದು ಹೊಮ್ಮುತ್ತದೆ. ಆ ಗ್ರಾಮ್ಯ ಜೀವನದ ಪರಿಮಳವನ್ನು ಆಘ್ರಾಣಿಸುತ್ತ ಸಾಗಿದರೆ ಆಕಾಶವನ್ನೇ ತನ್ನ ಮುಡಿಗೇರಿಸಿಕೊಂಡು ನಿಂತಂತಿರುವ ಹೊಯ್ಸಳ ಶೈಲಿಯ ಮನಮೋಹಕ ಬಸದಿಗಳು ಕಣ್ಣ ಬೊಗಸೆ ಬಿದ್ದಕೂಡಲೇ ಆದಷ್ಟು ಬೇಗ ಇಡೀ ಬಸದಿಗಳನ್ನು ಕಣ್ತುಂಬಿಕೊಳ್ಳಬೇಕು; ಶಿಲ್ಪಕಲೆಗಳು ಕಾಣಿಸುವ ವಿಹಂಗಮ ಲೋಕದಲ್ಲಿ ಮುಳುಗೇಳಬೇಕು ಎನ್ನುವ ಆಸೆಯೂ ಹೆಚ್ಚುತ್ತಾ ಹೋಗುತ್ತದೆ. ಆ ಬಸದಿಯನ್ನು ನೋಡುವ ಮೊದಲ ನೋಟದಲ್ಲಿಯೇ ಕಾಲುಗಳು, ಕಣ್ಣುಗಳು ಒಮ್ಮೆ ಸ್ತಂಭೀಭೂತವಾಗಿ ಆ ಬಸದಿಯ ಹೊರ ಸೌಂದರ್ಯವನ್ನು ರಸಾಸ್ವಾದನೆ ಮಾಡುತ್ತ ನಿಂತುಬಿಡುತ್ತದೆ.

## ಬೆಡಗು ಭಾವಗಳ ಸಾಂಗತ್ಯದಲಿ

ಹೊಯ್ಸಳರ ಕಾಲದ ವಾಸ್ತುಶಿಲ್ಪವೆಂದರೆ ಹೇಳಬೇಕೇ? ಆ ಶಿಲ್ಪಕಲೆಯ ಮಹೋನ್ನತ ಶೈಲಿ, ಲಾಲಿತ್ಯ, ಭಾವ, ಬೆಡಗು, ಅಚ್ಚುಕಟ್ಟುತನ ಎಲ್ಲವೂ ಮೈನವಿರೇಳಿಸುತ್ತದೆ. ಬಸದಿಯ ಆವರಣ ಹೊಕ್ಕ ಕೂಡಲೇ ವಿಶಾಲವಾಗಿ ಹರಡಿ ನಿಂತಿರುವ ಆದಿನಾಥ ಬಸದಿ, ಶಾಂತಿನಾಥ ಬಸದಿ, ಪಾರ್ಶ್ವನಾಥ ಬಸದಿಗಳ ಸರಳ ಕಲಾತ್ಮಕ ರೂಪವನ್ನು ಒಂದಷ್ಟು ಹೊತ್ತು ಧ್ಯಾನಸ್ಥವಾಗಿ ನಿಂತು ಅನುಭವಿಸಬೇಕು ಎನ್ನುವ ಭಾವನೆಯಾಗದೇ ಇರಲು ಸಾಧ್ಯವೇ ಇಲ್ಲ. ಆ ನುಣುಪು ಕಲ್ಲುಗಳ ವರ್ಣವೈಭವ, ವಿನ್ಯಾಸ, ಕುಸುರಿ, ಗತ್ತು, ಸೌಮ್ಯತೆಗಳೇ ಒಂದರೆಕ್ಷಣ ಧ್ಯಾನಸ್ಥವಾಗಿ ನಿಂತುಬಿಡುವಂತೆ ಮಾಡುತ್ತದೆ ಎನ್ನುವುದು ಮಾತ್ರ ನಿಜ.

ಎಲ್ಲಾ ಐತಿಹಾಸಿಕ ವಾಸ್ತುಶಿಲ್ಪಗಳು ನಮ್ಮನ್ನು ಒಂದಲ್ಲ ಒಂದು ರೀತಿಯಲ್ಲಿ ಹಿಡಿದಿಟ್ಟುಕೊಳ್ಳುವುದು ನಿಜ. ಹಾಗೆ ಹಿಡಿದಿಟ್ಟುಕೊಂಡಾಗ ನಾವು ಒಂದಷ್ಟು ಧ್ಯಾನಸ್ಥರಾಗಿ ಐತಿಹಾಸಿಕ ಪ್ರಜ್ಞೆಯನ್ನು ನಮ್ಮೊಳಗೆ ಆವಾಹಿಸಿಕೊಂಡು, ನಾವು ಕಂಡೇ ಇರದ ಇತಿಹಾಸದ ಕಥೆಗಳನ್ನು ಬರೀ ಕಲ್ಪನೆಯಲ್ಲಿಯೇ ಮೆಲುಕು ಹಾಕಿಕೊಳ್ಳುತ್ತೇವೆ. ಅಲ್ಲಿನ ಕಲ್ಲು ಕಲ್ಲುಗಳನ್ನು ನುಣ್ಣಗೇ ಮುಟ್ಟಿದಾಗ



ಬಸದಿಹಳ್ಳಿಯ ಶಾಂತ ಪರಿಸರಕ್ಕೆ ಇಂಬು ನೀಡುವ ಕಲ್ಯಾಣಿ



ಚೆಲುವಿನ ಚಿತ್ತಾರಗಳ ನಡುವೆ ಪಾರ್ಶ್ವನಾಥ